**ದಿನಾಂಕಃ 06-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಸ್ ವಿ   ವಕೀಲರಿಂದಃ**

ನನ್ನ ತಂದೆಯ ಹೆಸರು ರಂಗನಾಥಶರ್ಮ ಎಂದರೆ ಸರಿ. ಅವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಮೃತರಾಗಿ 12 ತಿಂಗಳು ಕಳೆದಿರುತ್ತದೆ. ನನ್ನ ತಂದೆಗೆ ಒಟ್ಟು 5 ಜನ ಮಕ್ಕಳು ಅವರುಗಳಲ್ಲಿ ನಾನು ನನ್ನ ತಮ್ಮ ಹಾಗೂ 3 ಜನ ಹೆಣ್ಣು ಮಕ್ಕಳಿರುತ್ತಾರೆ. ಹೆಣ್ಣು ಮಕ್ಕಳ ಹೆಸರುಗಳೆಂದರೆ ವಿಜಯಲಕ್ಷ್ಮಿ , ವೈದೇಹಿ ಮತ್ತು ಕೃಷ್ಣವೇಣಿ. ನನ್ನ ತಂದೆಯವರು 4 ಅಣ್ಣ-ತಮ್ಮಂದಿರು ಅವರುಗಳೆಂದರೆ 1) ಶ್ರೀನಿವಾಸ ತಾತಚಾರ್ , 2) ಬಿ ಕೆ ರಂಗನಾಥಶರ್ಮ 3) ವೆಂಕಟಾಚಾರ್. ನಾನು ರಂಗನಾಥಶರ್ಮ ರವರ ಮಗನಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದವರಿಗೆ ದಾವಾ ಆಸ್ತಿಯ ಮೇಲೆ ಸಮಾನ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಈಗಾಗಲೇ ಭಾಗ ಆಗಿರುತ್ತದೆ ಎಂದ ನುಡಿಯುತ್ತಾರೆ. ಪ್ರತಿವಾದಿ ಶ್ರೀನಿವಾಸತಾತಚಾರ್ ಮಗ ಎಂದರೆ ಸರಿ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಶ್ರೀನಿವಾಸತಾತಚಾರ್ ರವರಿಗೆ 3 ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು ಇರುತ್ತಾರೆ. ಅವರುಗಳ ಹೆಸರು 1) ಕೃಷಮನ್ನಾರ್ 2) ಬಿ ಎಸ್ ರಂಗನಾಥ 3) ವಿ ಎಸ್ ವೇಂದಾಂತಚಾರ್ 4) ವಿಜಯಮ್ಮ ಆಗಿರುತ್ತಾರೆ. ಇವರುಗಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಇವರುಗಳಲ್ಲಿ ವೇಂದಾಂತಚಾರ್ ಮಾತ್ರ ಬದುಕಿರುವುದು ಹೊರತುಪಡಿಸಿ ಬೇರೆ ಯಾರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಶ್ರೀನಿವಾಸತಾತಚಾರ್‌ರವರ ಮಕ್ಕಳ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

(ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ., ಪಾವಗಡ**